7	ಮಾಡೆಲ್ಲರ್	01
8	ಅಂಕೆ ಸಂಖ್ಯೆ ತಂತ್ರಜ್ಞರು	01
9	ಉಪ ಗ್ರಂಥಪಾಲಕರು	01
10	ವೈದ್ಯಕೀಯ ಸಮಾಜ ಸೇವಕರು	02
11	ಇತರೆ	105

ಬೀದರ್ ಜಿಲ್ಲೆಗೆ ವಕ್ಫ್ ಅನುದಾನದ ಬಿಡುಗಡೆ

395 (730) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಂದ ಕಳೆದ ಮೂರು ವರ್ಷಗಳ ಅವಧಿಯಲ್ಲಿ ವಕ್ಫ್ ಮಂಡಳಿಯಿಂದ ಅನುದಾನವನ್ನು ಕೋರಿ ಎಷ್ಟು ಪ್ರಸ್ತಾವನೆಗಳು ಬಂದಿರುತ್ತವೆ (ಪ್ರಸ್ತಾವನೆಗಳ ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಆ) ಈ ಪೈಕಿ ಎಷ್ಟು ಪ್ರಸ್ತಾವನೆಗಳಿಗೆ ಎಷ್ಟೆಷ್ಟು ಅನುದಾನವನ್ನು ನೀಡಲಾಗಿದೆ (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಇ) ಈ ಅನುದಾನದಲ್ಲಿ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರಗಳೇನು (ಪೂರ್ಣ ವಿವರಗಳನ್ನು ಒದಗಿಸುವುದು);

ಈ) ಈ ಪೈಕಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು ಎಷ್ಟು ಅಪೂರ್ಣವಾಗಿವೆ;

ಉ) ಹಾಗಿದ್ದಲ್ಲಿ, ಅಪೂರ್ಣ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಪ್ರೊ.ಡಾ: ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕ್ಷೇತ್ರವಾರು ವಿವರವನ್ನು ಅನುಬಂಧ 'ಅ' ರಲ್ಲಿ ನೀಡಲಾಗಿದೆ.

ಆ) ಕ್ಷೇತ್ರವಾರು ವಿವರವನ್ನು ಅನುಬಂಧ 'ಅ' ರಲ್ಲಿ ನೀಡಲಾಗಿದೆ.

ಇ) ವಕ್ಫ್ ಆಸ್ತಿಗಳಾದ ಮಸೀದಿ, ಈದ್ಗಾ, ದರ್ಗಾ, ಆಶೂರ್ ಖಾನ, ಅರಬಿಕ್ ಮದರಸಾಗಳು ಹಾಗೂ ಖಬರಸ್ಥಾನ್‌ಗಳ ಸುತ್ತು ಗೋಡೆಗಾಗಿ ಸರ್ಕಾರವು ಅನುದಾನವನ್ನು ಮಂಜೂರು ಮಾಡಿದ್ದು ಸದರಿ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ.

ಈ) 51 ಕಾಮಗಾರಿಗಳು ಮುಗಿದಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಉ) ಅಪೂರ್ಣ ಕಾಮಗಾರಿಗಳನ್ನು 6 ತಿಂಗಳ ಅವಧಿಯಲ್ಲಿ ಮುಗಿಸಲು ಸಾಧ್ಯವಿರುತ್ತದೆ.

ಅನುಬಂಧ – ಅ

GRANT-IN-AID SANCTIONED & RELEASED BY THE GOVERNMENT OF KARNATAKA TO THE WKAF INSTITUTONS OF BIDAR DISTRICT

2006-07

(In lakhs)

Sl. No.	Name of the Constituency	Amount Sanctioned	No. of Proposals
01	HUMNABAD	14.50	30
02	BIDAR	08.75	17
03	BHALKI	00.50	01
04	AURAD	Nil	Nil
05	B.KALYAN INCLUSIVE OF HULSUR CONSTITUENCY	13.75	10
	TOTAL	**37.50**	**58**

2007-08

Sl. No.	Name of the Constituency	Amount Sanctioned	No. of Proposals
01	HUMNABAD	02.50	05
02	BIDAR	02.00	04
03	BHALKI	Nil	Nil

04	AURAD	00.50	01
05	B.KALYAN INCLUSIVE OF HULSUR CONSTITUENCY	01.00	02
	TOTAL	**06.00**	**12**

2008-09

Sl. No.	Name of the Constituency	Amount Sanctioned	No. of Proposals
01	HUMNABAD	00.50	01
02	BIDAR	08.00	02
03	BHALKI	01.00	01
04	AURAD	00.00	00
05	B.KALYAN INCLUSIVE OF HULSUR CONSTITUENCY	00.50	01
	TOTAL	**10.00**	**05**

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಯೋಜನೆಗಳು

397 (611) ಶ್ರೀ ಜಾರ್ಜ್ ಕೆ.ಜೆ. (ಸರ್ವಜ್ಞನಗರ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲ್ಪಸಂಖ್ಯಾತರ ನಿರ್ದೇಶನಾಲಯಕ್ಕೆ 2008–09ನೇ ಸಾಲಿನಲ್ಲಿ ಬಿಡುಗಡೆ ಆದ ಮೊತ್ತವೆಷ್ಟು; ಶಾದಿಮಹಲ್, ಚರ್ಚ್, ಗುರುದ್ವಾರ ನಿರ್ಮಿಸಲು ನಿಗಧಿ ಮಾಡಿದ ಮೊತ್ತವೆಷ್ಟು; ಯಾವ ಯಾವ ಜಿಲ್ಲೆಗಳಿಂದ ಬಂದ ಅರ್ಜಿಗಳು ಎಷ್ಟು ಸಂಪೂರ್ಣ ವಿವರ ನೀಡುವುದು;

ಆ) ಶಾದಿಮಹಲ್, ಚರ್ಚ್, ಗುರುದ್ವಾರಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ; ವಿಳಾಸ ಮಂಜೂರಾದ ಮೊತ್ತದ ವಿವರಣೆ ನೀಡುವುದು?